ಸಿ.ಸಿ ನಂ. 1676 /2025 ಪಿಡಬ್ಲ್ಯೂ-1

ದಿನಾಂಕಃ 07.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು - ಶ್ರೀ.ಎಂ.ಆರ್.ಎಸ್ ವಕೀಲರಿಂದ ಆರೋಪಿ ಪರ

ನಿಪಿ-1 ರಲ್ಲಿ ಅಂಕಿಯಲ್ಲಿ 3 ನ್ನು 8 ಮಾಡಿದ ರೀತಿಯಲ್ಲಿ ಕಂಡು ಬರುತ್ತಿದೆ ಎಂದರೆ ಸರಿಯಲ್ಲ. ನಿಪಿ-1 ರ ಬರವಣಿಗೆಗೂ ಮತ್ತು ಉಳಿದ ಬರವಣಿಗೆಗೂ ವ್ಯತ್ಯಾಸ ಇರುತ್ತದೆ ಎಂದರೆ ಗೊತ್ತಿಲ್ಲ ಎಂದು ಹೇಳುವರು. ನಿಪಿ-1 ರಲ್ಲಿ ಸಹಿ ಮಾಡಿದ ಶಾಹಿಗೂ ಮತ್ತು ಉಳಿದ ಶಾಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನನ್ನ ಹೆಸರು ಮತ್ತು ಮೊತ್ತವನ್ನು ಒಬ್ಬರೆ ತುಂಬಿದ ರೀತಿಯಲ್ಲಿ ಕಂಡು ಬರುತ್ತಿದೆ ಎಂದರೆ ಗೊತ್ತಿಲ್ಲ ಎನ್ನುವರು. ದಿನಾಂಕವನ್ನು ತದ ನಂತರ ಬೇರೆ ಪೆನ್ನಿನಲ್ಲಿ ಬರೆದ ರೀತಿ ಕಂಡು ಬರುತ್ತಿದೆ ಎಂದರೆ ಸರಿಯಲ್ಲ. ನಿಪಿ-1 ಬರವಣಿಗೆಯು ಆರೋಪಿಯದ್ದಾಗಿರುವುದಿಲ್ಲ ಸಾಕ್ಷಿ ಆತ ಬೇರೆಯವರ ಬಳಿ ಬರೆಸಿರಬಹುದು ಎಂದು ಹೇಳುವರು.

ದೂಗೂರು ಪರಮೇಶ್ ರವರ ಕಚೇರಿಯಲ್ಲಿ ಬರೆದ ಪ್ರನೋಟಿನಲ್ಲೂ ಸಹ 8 ಲಕ್ಷ ಬರೆಯಲಾಗಿರುತ್ತದೆ ಎಂದರೆ ಸಾಕ್ಷಿ ದಾಖಲೆ ನೋಡಬೇಕು ಎನ್ನುವರು. ಚೆಕ್ ನಂಬರು 000002 ಚೆಕ್ ನನ್ನ ಬಳಿ ಇರಬಹುದು ನಾನು ನೋಡಬೇಕು ಎನ್ನುವರು. ಸದರಿ ಚೆಕ್ ನಲ್ಲಿ ಏನೂ ಬರೆಯಲಾಗಿದೆ ಎಂದು ನನಗೆ ಈಗ ನೆನಪಿಲ್ಲ. ಸದರಿ ಚೆಕ್ ಮತ್ತು ಪ್ರನೋಟ್ ಹಾಜರುಪಡಿಸಬಲ್ಲೆ. ಆ ಸಂದರ್ಭದಲ್ಲಿ ದೂಗೂರೂ ಪರಮೇಶ್ ಕಚೇರಿಯಲ್ಲಿ ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿಲ್ಲ. ಚೆಕ್ ಗಳನ್ನು ನನ್ನ ಗಂಡನಿಗೆ ನೀಡಲಾಗಿರುತ್ತದೆ ಎಂದರೆ ಸರಿ.

ನಾನು ತಿಳುವಳಿಕೆ ನೋಟೀಸುನಲ್ಲಿ ಇನ್ನು ಉಳಿದ ಚೆಕ್ ಮತ್ತು ಪ್ರನೋಟ್ ಬಗ್ಗೆ ಹೇಳಿರುತ್ತೇನೆ. ನಾನು ಮನೆ ಮಾರಾಟ ಮಾಡಿದಾಗ ಖರೀದಿದಾರರು ನೀಡಿದ ಚೆಕ್ ಗಣಪತಿ ಬ್ಯಾಂಕಿಗೆ ಜಮಾ ಮಾಡಿರುತ್ತೇನೆ. 2018 ರಿಂದ ಎಷ್ಟು ಹಣ ನಾನು ಬ್ಯಾಂಕಿನಿಂದ ತೆಗೆದಿರುತ್ತೇನೆ ಸ್ಟೇಟಮೆಂಟಿನಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಸ್ಟೇಟ್ಮೆಂಟ್ ಹಾಜರುಪಡಿಸಬಹುದಾ ಎಂದರೆ ಸಾಕ್ಷಿ ನೋಡಬೇಕು ಎನ್ನುವರು. ನಾನು ನಾಲ್ಕು ವರುಷದಲ್ಲಿ ಎಷ್ಟು ಹಣ ತೆಗೆದಿರುತ್ತೇನೆಂದು ನನಗೆ ಈಗ ನೆನಪಿಲ್ಲ ಎನ್ನುವರು.

ಮನೆ ಮಾರಾಟ ಮಾಡಿದ ಹಣ ಯೂನಿಯನ್ ಬ್ಯಾಂಕಿನಲ್ಲಿ ಮಾತ್ರ ಇತ್ತು. ಅವರು ನೀಡಿದ ಚೆಕ್ ಎಷ್ಟು ಮೊತ್ತ ಎಂದು ನನಗೆ ಈಗ ನೆನಪು ಇಲ್ಲ. 2015 ನೇ ಇಸವಿಯಲ್ಲಿ ನಿವೇಶನ ಮತ್ತು ಮನೆ ಬೆಲೆ ಬರೀ 2 ಲಕ್ಷ ಇತ್ತು ಎಂದರೆ ಗೊತ್ತಿಲ್ಲ ಎನ್ನುವರು.

ಆರೋಪಿಗೆ ಹಣ ನೀಡಿದ ಸಂದರ್ಭದಲ್ಲಿ ಯಾವುದೇ ಬರವಣಿಗೆ ದಾಖಲೆ ಪಡೆದಿರುವುದಿಲ್ಲ.

ಆರೋಪಿ ಏನೂ ಕೆಲಸ ಮಾಡುತ್ತಾನೆ ಎಂದು ನನಗೆ ಗೊತ್ತಿಲ್ಲ ಆದರೆ ಮೇಸ್ರಿ ಎಂದು ಕೇಳಪಟ್ಟಿರುತ್ತೇನೆ ಎನ್ನುವರು. ನಾನು ಸಾಲ ನೀಡದ ಕಾರಣ ನಾನು ಸಾಲ ನೀಡಿದ ದಿನಾಂಕ ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿ ಜೊತೆಗೆ ನಾನು ಅಥವಾ ನನ್ನ ಗಂಡ ಯಾವುದೇ ನಿವೇಶನ ವ್ಯವಹಾರ ಮಾಡಿರುವುದಿಲ್ಲ.

ದಿನಾಂಕ 13-11-2020 ರಂದು ನಾನು ಯುವರಾಜರ ಬಳಿ ನಿವೇಶನ ಖರೀದಿ ಮಾಡಿರುತ್ತೇನೆಂದರೆ ಸರಿಯಲ್ಲ. ನನ್ನ ಸಹಿ ನೋಡಿದರೆ ನಾನು ಗುರುತಿಸಬಲ್ಲೆ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಅದರಲ್ಲಿ ನಿಮ್ಮ ಸಹಿ ಯಾ ಎಂದರೆ ಅದು ನನ್ನ ಸಹಿ ತರಹ ಕಾಣುತ್ತಿದೆ ಆದರೆ ಅದು ಜೆರಾಕ್ಸ ಪ್ರತಿಯಾದ ಕಾರಣ ನಿಖರವಾಗಿ ಹೇಳಲು ಆಗುವುದಿಲ್ಲ ಎನ್ನುವರು. ದಿನಾಂಕ 13-11-2020 ರಂದು ಯುವರಾಜ ವರಿಂದ ನಾನು ಖಾಲಿ ನಿವೇಶನ ಖರೀದಿ ಮಾಡಿರುತ್ತೇನೆ ಅದು ಮೇಲೆ ಹೇಳಿದ ಪತ್ರವಾಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುವರು.

ಈ ಕೇಸಿನ ಆರೊಪಿ ನನ್ನ ಗಂಡನಿಗೆ ಆ ನಿವೇಶನದ ವ್ಯವಹಾರ ಮಾಡಿಸಿರುತ್ತಾರೆ ಎಂದರೆ ಗೊತ್ತಿಲ್ಲ ಎನ್ನುವರು. ಸದರಿ ನಿವೇಶನದ ವ್ಯಾಪಾರ ಮಾಡಿಸಿದ ಕಾರಣ ಐವತ್ತು ಸಾವಿರ ರೂ ಆರೋಪಿ ನನ್ನ ಗಂಡನಿಂದ ಕಮೀಶನ್ ಬಾಬ್ತು ಪಡೆದಿದ್ದರು ಎಂದರೆ ಗೊತ್ತಿಲ್ಲ ಎನ್ನುವರು. ಹೆಚ್ಚಿನ ಕಮೀಶನ್ ಗೆ ಸಂಬಂಧಪಟ್ಟಂತೆ ವ್ಯವಹಾರ ಆದಾಗ ಆರೋಪಿಯಿಂದ 2 ಚೆಕ್ ಮತ್ತು ಪ್ರನೋಟ್ ನನ್ನ ಗಂಡ ಪಡೆದಿದ್ದರು ಎಂದರೆ ಆ ವ್ಯವಹಾರ ನನಗೆ ಗೊತ್ತಿಲ್ಲ ಎಂದು ಹೇಳುವರು. ಕಮೀಶನ್ ಹಣ ಆರೋಪಿ ನನ್ನ ಗಡನ ಬಳಿ ಕೇಳಲಾಗಿ ಆತ ನೀಡದೇ ಚೆಕ್ ನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಿವೇಶನಕ್ಕೆ ಸಂಬಂದಪಟ್ಟಂತೆ ನನ್ನ ಗಂಡ ಮತ್ತ ಆರೋಪಿ ಗಲಾಟೆಯಾಗಿ ಪಂಚಾಯತಿಯಾಗಿರುತ್ತದೆ ಎಂದರೆ ಗೊತ್ತಿಲ್ಲ ಎನ್ನುವರು. ಆಗ ಸಹ ನಾನು ಹಾಜರು ಇದ್ದೆ ಎಂದರೆ ಸರಿಯಲ್ಲ. ಪಂಚಾಯಿತಿ ದೂಗುರು ಪರಮೇಶ್ ರ ಬಳಿ ನಡೆದಿರುತ್ತದೆ ಎಂದರೆ ಗೊತ್ತಿಲ್ಲ ಎನ್ನುವರು. ಪಂಚಾಯಿತಿಯಲ್ಲಿ ಚೆಕ್ ನ್ನು ಪಡದು ನನ್ನ ಗಂಡ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.

ಆರೋಪಿ ಆರ್ಥಿಕ ವಾಗಿ ಸ್ಥಿತಿವಂತರಲ್ಲ ಎಂದರೆ ಸರಿಯಲ್ಲ. ನನ್ನ ಬಳಿ 8 ಲಕ್ಷ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಹಣ ಕೇಳಿರುವುದಿಲ್ಲ ಮತ್ತು ನಾನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ 8 ಲಕ್ಷ ಸಾಲ ನೀಡುವ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಉದ್ಯೋಗವನ್ನು ಮಾಡುವುದಿಲ್ಲ ಮತ್ತು ಆದಾಯ ಮೂಲ ಇಲ್ಲ ಎಂದರೆ ಸರಿಯಲ್ಲ. ನಾನು ಮನೆ ಮಾರಾಟ ಮಾಡಿಲ್ಲ , 2022 ರಲ್ಲಿ ಬ್ಯಾಂಕಿನಲ್ಲಿ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಹಣ ಇಲ್ಲದ ಕಾರಣ ನಾನು ಪಾಸ್ ಪುಸ್ತಕ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರ್ಥಿಕ ಸ್ಥಿತಿ ತಿಳಿದು ಬರುತ್ತದೆ ಎಂದು ಹೇಳಿ ನಾನು ಪಾಸ್ ಪುಸ್ತಕ ಇಲ್ಲ ಎಂದು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿಯಿಂದ ಯಾವುದೇ ಪರಿಹಾರ ಪಡೆದುಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ನಾನು ಖಾಲಿ ಚೆಕ್ ಮತ್ತು ಪ್ರನೋಟನ್ನು ದುರುಪಯೋಗಪಡಿಸಿಕೊಂಡು ಪ್ರಕರಣವನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಅಕ್ರಮ ದಾಖಲೆಗಳನ್ನು ಸೃಷ್ಟಿಸಿ ನಾನು ಈ ಸುಳ್ಳು ಕೇಸು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ